ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೆಚ್ಚಾಗಿರುವ ಗೋಮಾಳ ಜಮೀನನ್ನು ವಿಲೇವಾರಿ ಮಾಡುವಾಗ ಪಂಚಾಯತಿಯವರ ಅಭಿಪ್ರಾಯವನ್ನು ಕೇಳುತ್ತೀರಾ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಪಂಚಾಯತಿಯವರ ಸ್ವಾಧೀನಕ್ಕೆ ಕೊಟ್ಟಿರುವ ಗುಂಡು ತೋಪುಗಳು ಮುಂತಾದವುಗಳ ವಿಷಯದಲ್ಲಿ ಕೇಳುತ್ತೇವೆ. ಬೇರೆ ವಿಷಯದಲ್ಲಿ ಕೇಳುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನೇಕ ಗ್ರಾಮಗಳು ಬೇಡರಾಕ್ ಗ್ರಾಮಗಳಾಗಿರುತ್ತವೆ. ಪಕ್ಕದಲ್ಲಿರುವ ಗ್ರಾಮಗಳಿಗೆ ಗೋಮಾಳವಿಲ್ಲದೆ ಪಕ್ಕದಲ್ಲಿರುವ ಬೇಡರಾಕ್ ಗ್ರಾಮದ ಗೋಮಾಳವನ್ನು ಉಪಯೋಗಿಸುತ್ತಿರುತ್ತಾರೆ. ಆದುದರಿಂದ ಇಂಥ ಜಮೀನನ್ನು ವಿಲೇವಾರಿ ಮಾಡುವಾಗ ಅಕ್ಕಪಕ್ಕದ ಗ್ರಾಮದವರ ಅಭಿಪ್ರಾಯವನ್ನು ತೆಗೆದುಕೊಂಡು ವಿಲೇವಾರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರತಿಯೊಂದು ಜಮೀನನ್ನು ಕೊಡುವಾಗಲೂ ಮಹಜರ್ ಆಗುತ್ತದೆ. ಆ ಮಹಜರನ್ನು ಚಾವಡಿಯಲ್ಲಿ ಮಾಡಬೇಕು ಎಂದು ಇದೆ. ಅದನ್ನೇ ಗ್ರಾಮಸ್ಥರ ಅಭಿಪ್ರಾಯ ಎಂದು ಸಾಮಾನ್ಯವಾಗಿ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಗೋಮಾಳ ಲ್ಯಾಂಡ್ಸ್ ಡಿಸ್ಪೋಸಲ್ ಮಾಡುವುದಕ್ಕೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಮಾಡುತ್ತಿರುವುದು ಹಿಂದಿನ ಕಾಲದ, ಓಬೀರಾಯನ ಕಾಲದ ರೀತಿಯನ್ನು ಅನುಸರಿಸಲಾಗುತ್ತಿದೆ. ಅದನ್ನು ರಿವೈಜ್ ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಗೋಮಾಳ ಲ್ಯಾಂಡ್ ವಿಲೇವಾರಿ ಮಾಡುವಾಗ್ಗೆ ಅದೇ ಗ್ರಾಮದಲ್ಲಿರತಕ್ಕ ಜಮೀನು ಇಲ್ಲದೇ ಇರತಕ್ಕಂಥವರಿಗೆ ಹಾಗೂ ಆಜುಬಾಜು ಗ್ರಾಮದವರಿಗೆ ಕೊಡಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಯಾರಿಗೆ ಮೊದಲು ಕೊಡಬೇಕು ಎಂಬುದನ್ನು ಗೊತ್ತು ಮಾಡಲಾಗಿದೆ. ಒಂದು ವೇಳೆ ಹಾಗೆ ಕೊಡದೇ ಹೋದರೆ ಜನರು ಅಪೀಲು ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಎಕರೆ ಭೂಮಿ ಎಕ್ಸೆಸ್ ಲ್ಯಾಂಡ್ ಇದೆ ಅದೆಲ್ಲ ವನ್ನೂ ವ್ಯವಸಾಯ ಮಾಡಲು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಎಕರೆ ಎಂದು ಹೇಳುವುದಕ್ಕಾಗುವುದಿಲ್ಲ. ಗೋಮಾಳ್ ಲ್ಯಾಂಡ್ ಇದ್ದರೆ ಕೆಲವು ಕೇಸ್ ಅನ್‌ಆಥರೈಜ್ಡ್ ಕಲ್ಟಿವೇಶನ್ ಮಾಡುತ್ತಾರೆ. ಸಂದರ್ಭಗಳನ್ನು ಪರಿಶೀಲಿಸಿ ಕೊಡುತ್ತೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಗೌರೀಬಿದನೂರು ತಾಲ್ಲೂಕಿನಲ್ಲಿ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಜಮೀನು ಇಲ್ಲದವರಿಗೆ ಜಮೀನು ಕೊಡಬೇಕೆಂದು ಇದ್ದರೂ ಕೂಡ ಹಾಗೆ ಕೊಟ್ಟಿಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಒಂದು ವೇಳೆ ಆಗಿದ್ದರೆ ಡಿ. ಸಿ., ಡಿವಿಜನಲ್ ಕಮಿಷನರ್, ರೆವೆನ್ಯೂ ಟ್ರಿಬ್ಯೂನಲ್, ಹೈಕೋರ್ಟ್ ವರೆಗೆ ಅಪೀಲು ಹೋಗುವುದಕ್ಕೆ ಅವಕಾಶ ಇದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅದೇ ಊರಿನವರಿಗೆ ಪ್ರಿಫರೆನ್ಸ್ ಕೊಡಬೇಕೆಂದು ಇದ್ದರೂ ಕೂಡ ನೂರಕ್ಕೆ ಎಂಬತ್ತರಷ್ಟು ಭಾಗ ಜಮೀನು ಕೊಡುವುದರಲ್ಲಿ ಆ ತರಹ ಮಾಡುವುದು ಕಾಣುತ್ತಿಲ್ಲ. ಇದಕ್ಕೆ ಕಾರಣವೇನು ? ಇದನ್ನು ನಿರಪಡಿಸಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತರಹ ಮಾಡಿಲ್ಲ.

---

## Grant of lands through Darkhast in Mandya District.

*Q.—341. Sri J. DEVAIAH (Mandya).—

Will the Government be pleased to state:—

(a) the total number of persons to whom lands have been granted through darkhast in Mandya Taluk from 1st January 1964 to end of

(SRI J. DEVIAH)

December 1964 by the Tahsildar and Revenue Sub-Division Officer together with the extent of land granted (the extent of dry and wet lands granted may be furnished separately) ;

(*b*) out of them, the number of Scheduled Castes persons to whom lands have been granted together with the extent of land granted during the said period ?

*A*.—Sri M. V. KRISHNAPPA (Minister for Revenue).—

(*a*) 723 persons.
Dry : 899 Acres and 5 guntas.
Wet : 266 Acres and 20½ guntas.

(*b*) 114 Scheduled Caste persons.
188 Acres and 12 Guntas.

ಶ್ರೀ ಜೆ. ದೇವಯ್ಯ.—ಮಂಡ್ಯ ಜಿಲ್ಲೆಯಲ್ಲಿ ದರಖಾಸ್ತಿನ ಮೂಲಕ ಜಮೀನು ಮಂಜೂರು ಮಾಡಿರುವುದು ಒಟ್ಟು ಎಷ್ಟು ಜನಕ್ಕೆ ಎಂದು ಕೇಳಿದ ನನ್ನ ಪ್ರಶ್ನೆಗೆ 723 ಜನರು ಎಂದು ಉತ್ತರ ಹೇಳಿದೆ. ಕೇಳಿರತಕ್ಕ ಜನ ಹೆಚ್ಚು ಇಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಟ್ಟು ಎಷ್ಟು ಜನ ಕೇಳಿದ್ದರೋ ಅಷ್ಟು ಜನಕ್ಕೆ ಕೊಟ್ಟಿದೆ.

ಶ್ರೀ ಜೆ. ದೇವಯ್ಯ.—ಜಮೀನು ತೆಗೆದುಕೊಂಡಿರತಕ್ಕಂಥವರು ಕೆಲವರು ಜಮೀನಿಗೆ ಬೆಲೆ ಬರುತ್ತದೆ ಎಂದು ಮತ್ತೊಬ್ಬರಿಗೆ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ಕಾಗದ ಬರೆದು ತಿಳಿಸಬೇಕು. ಆಗ ಅದನ್ನು ವಿಚಾರಣೆ ಮಾಡುತ್ತೇವೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಗುಂಡು ತೋಪು ನಾಗುವಳಿಗೆ ವಿಲೇವಾರಿ ಮಾಡುವುದಕ್ಕೆ ಪಂಚಾಯತಿಗಳಿಗೆ ವಹಿಸಿಕೊಡಬೇಕೆಂದು ಆರ್ಡರ್ ಆಗಿದೆಯಲ್ಲವೇ ?

ಶ್ರೀ ಎಂ.ವಿ. ಕೃಷ್ಣಪ್ಪ.—ಅಮಲ್ದಾರರು ಹಂಚಬೇಕೆಂದು ಆರ್ಡರ್ ಆಗಿದೆ ಎಂಬುದು ಗೊತ್ತಿದೆ.

ಶ್ರೀ ಜೆ. ದೇವಯ್ಯ.—ಬೇರೆಯವರಿಗೆ ಜಮೀನು ಕೊಟ್ಟಿರುವುದನ್ನು ತನಿಖೆ ಮಾಡುತ್ತೀರಾ ? ಇದನ್ನು ಆಲೋಚನೆ ಮಾಡಲು ಕಮಿಟಿ ನೇಮಕ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಗದ ಬರೆಯಿರಿ ನೋಡೋಣ. ರ್ಯಾಂಡ್ ಗ್ರ್ಯಾಂಟ್ ರೂಲ್ಸ್ ವಿರೋಧವಾಗಿ ಕೊಟ್ಟಿದ್ದರೆ ಅವೀಲು ಮಾಡುವುದಕ್ಕೆ ಅವಕಾಶವಿದೆ.

---

## Formation of House Building Society for Scheduled Castes and Scheduled Tribes in Honnali Taluk.

*Q.—217. Sri D. PARAMESWARAPPA (Honnali).—

Will the Government be pleased to state:—

(*a*) whether any shares have been collected for the formation of House Building Society for Scheduled Castes and Scheduled Tribes people in Honnali Taluk ;

(*b*) if so, the number of shares and amount so far collected ;

(*c*) whether they have allotted any funds to the Society and if so, the amount of funds allotted ;